## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ನಾಗಮಂಗಲ.

## ಸಿ.ಸಿ. 283/2016

**ಸಾಕ್ಷಿದಾರರ ಹೇಳಿಕೆಃ** **ಪ್ರಾಸಾ 1**

ದಿನಾಂಕಃ **28-02-2024** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

### ಪಾಟೀ ಸವಾಲುಃಆರೋಪಿ ಪರ ವಕೀಲರಿಂದ

ನನ್ನ ಮತ್ತು 1ನೇ ಆರೋಪಿಯ ಮದುವೆಯನ್ನು ನಮ್ಮ ಮತ್ತು ಅವರ ಕುಟುಂಬದವರು ಸೇರಿ ಮಾಡಿರುತ್ತಾರೆ. 3 ಲಕ್ಷ ಖರ್ಚು ಮಾಡಿ ಮದುವೆ ಮಾಡಿರುವ ಸಂಬಂಧ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನನಗೆ ದಾಖಲೆಗಳ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. 1 ಲಕ್ಷ ಹಣವನ್ನು ಆರೋಪಿಗೆ ನೀಡಿರುವ ಬಗ್ಗೆ ನಮ್ಮ ಬಳಿ 1 ಲಕ್ಷ ಇತ್ತು ಎಂಬುದರ ಸಂಬಂಧ ದಾಖಲೆ ಇರುವುದಿಲ್ಲ. 15 ಗ್ರಾಂ ಚಿನ್ನದ ಚೈನು ಮಾಡಿಸಿರುವ ಬಗ್ಗೆ ಅದರ ರಸೀದಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ. ಆರೋಪಿಗಳಿಗೆ ವರದಕ್ಷಿಣೆಯಾಗಿ 1 ಲಕ್ಷ ನಗದು ಹಣವಾಗಲೀ, 15 ಗ್ರಾಂ ಚಿನ್ನವಾಗಲೀ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 5 ರಲ್ಲಿ 1ನೇ ಆರೋಪಿಗೆ ಒಂದು ಜೊತೆ ಷರ್ಟು ಮತ್ತು ಪ್ಯಾಂಟನ್ನು ಮಾತ್ರ ನೀಡುತ್ತಿರುವುದಾಗಿ ಕಾಣುತ್ತಿದ್ದು , ಅದರಲ್ಲಿ 1 ಲಕ್ಷ ನಗದು ಹಣವಾಗಲೀ, 15 ಗ್ರಾಂ ಚಿನ್ನವಾಗಲೀ ಕೊಡುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ .

ಚಾಸಾ 2 ನನ್ನ ತಂದೆ , ಚಾಸಾ 3 ನನ್ನ ತಾಯಿ. ಚಾಸಾ 4 ನನ್ನ ಸೋದರ ಮಾವ. ಚಾಸಾ 5 ಹಿಂಡಸಹಳ್ಳಿ ಗ್ರಾಮದವರು. ಈ ಪ್ರಕರಣ ದಾಖಲಾಗುವ ಮೊದಲು ನಾನು ಆರೋಪಿಯ ವಿರುದ್ದ ಪೊಲೀಸ ಠಾಣೆಯಲ್ಲಿ ಯಾವುದೇ ದೂರನ್ನು ಸಲ್ಲಿಸಿರಲಿಲ್ಲ. ಮದುವೆಯಾದ 2 ತಿಂಗಳ ತನಕ ಗಂಡನಮನೆಯಲ್ಲಿ ಇದ್ದೆ ಆನಂತರ ಜಗಳ ಮಾಡಿ ನನ್ನನ್ನು ತವರು ಮನೆಗೆ ಕಳುಹಿಸಿರುತ್ತಾರೆ. ತವರು ಮನೆಗೆ ಹೋದಾಗ ಶಿವಳ್ಳಿ ಪೊಲೀಸ ಠಾಣೆಗೆ ಹೋಗಿ ದೂರು ಕೊಡಲು ತೊಂದರೆ ಇರಲಿಲ್ಲ. 2 -3 ಸಲ ನ್ಯಾಯಾ ಪಂಚಾಯಿತಿ ಮಾಡಿ ನನ್ನನ್ನು ಆರೋಪಿಗಳ ಮನೆಗೆ ಕಳುಹಿಸಿದ್ದು ನಾನು ಎಷ್ಟು ದಿನಗಳ

ಕಾಲ ಆರೋಪಿಗಳ ಮನೆಯಲ್ಲಿ ಇದ್ದೆ ಎಂದು ಹೇಳಲು ಆಗುವುದಿಲ್ಲ. ದಿನಾಂಕ 04-8-2015 ರಂದು ರಾತ್ರಿ 9 ಗಂಟೆ ಸಮಯದಲ್ಲಿ ಆರೋಪಿಗಳು ನನ್ನ ಜೊತೆ ಜಗಳ ಮಾಡಿರುತ್ತಾರೆ. ಗಲಾಟೆಯಾದ ದಿನ ನನ್ನ ತಾಯಿ ಫೋನ್ ಮಾಡಿದ್ದ ಬಗ್ಗೆ ನಾನು ದಾಖಲಾತಿಯನ್ನು ಪೊಲೀಸರಿಗೆ ನೀಡಿರುವುದಿಲ್ಲ. ಆರೋಪಿಗಳು ನನಗೆ ಹಲ್ಲೆ ಮಾಡಿದ್ದ ಬಗ್ಗೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿರುವುದಿಲ್ಲ. ಗಲಾಟೆಯಾದ ದಿನ ಗ್ರಾಮದವರು ಯಾರು ಬಂದು ಜಗಳ ಬಿಡಿಸಿರುವುದಿಲ್ಲ. ಗಲಾಟೆಯಾದ 3 ದಿನಕ್ಕೆ ನಾನು ದೂರನ್ನು ಸಲ್ಲಿಸಿರುತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ನಾನು ಪೊಲೀಸ ಠಾಣೆಗೆ ಹೋದಾಗ ಪೊಲೀಸ ಠಾಣೆಯಲ್ಲಿ ಎಷ್ಟು ಸಹಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನೇ ಸ್ವತಃ ಮನೆಯಿಂದ ಬಿಟ್ಟು ಹೋಗಲು ಆರೋಳಿಗಳು ನನ್ನ ಜೊತೆ ಯಾವುದೇ ಜಗಳ ಮಾಡಿ ಹಲ್ಲೆ ಮಾಡದೇ ಇದ್ದರೂ ಸಹಾ ಸುಳ್ಳು ದೂರನ್ನು ಸಲ್ಲಿಸಿ,  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಐಶರಾಮಿ ಜೀವನಕ್ಕೆ ತಕ್ಕಂತೆ ಆರೋಪಿಗಳು ನನ್ನನ್ನು ನೋಡಿಕೊಳ್ಳದ ಕಾರಣ ಅವರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರ ಮಾಡಲು ಬಂದಿದ್ದ  ಪೊಲೀಸರು ಯಾವ ಪದನ್ನೊತಿ ಹೊಂದಿದ ಪೊಲೀಸರು ಎಂದು ನನಗೆ ಗೊತ್ತಿಲ್ಲ ಆದರೆ ಪೊಲೀಸರು ಮಹಜರ ಮಾಡಲು ಬಂದಿದ್ದರು ಎಂದು ನುಡಿಯುತ್ತಾರೆ. ಮಹಜರಗೆ ಚಾಸಾ 9 ಮತುತ 10 ರವರು ಸಹಿ ಮಾಡಿರುತ್ತಾರೆ. ಸ್ಥಳ ಮಹಜರಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳ ಮಹಜರನ ಚೆಕ್ಕುಬಂದಿ :  ಪೂರ್ವಕ್ಕೆ - ಚಲುವಯ್ಯ , ಪಶ್ಚಿಮಕ್ಕೆ - ಬೋರಯ್ಯ , ಉತ್ತರಕ್ಕೆ - ರಸ್ತೆ , ದಕ್ಷಿಣಕ್ಕೆ ಶಂಕರಲಿಂಗೇಗೌಡರ ಮನೆ ಇರುತ್ತದೆ. ಮಹಜರ ಕಾಲದಲ್ಲಿ ಪೊಲೀಸರು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.  ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳ ನನ್ನೊಂದಿಗೆ ವರದಕ್ಷಿಣೆ ವಿಚಾರವಾಗಿ ಯಾವುದೇ ಜಗಳ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.  ಅರೋಪಿಗಳು ಬಡವರಾಗಿರುವುದರಿಂದ ಅವರ ಜೊತೆ ನಾನು ಜೀವನ ಮಾಡಕಾಗುವುದಿಲ್ಲ ಎಂದು ಅವರ ಮನೆಯಿಂದ ಹೊರಗೆ ಬರಲು ಈ ರೀತಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

ನನ್ನ 10 ನೇ ತರಗತಿ ಮತ್ತು ಪಿಯುಸಿ ಅಂಕಪಟ್ಟಿ, ಟಿಸಿ ಮತ್ತು ಆಧಾರಕಾರ್ಡ ಆರೋಪಿಗಳ ಮನೆಯಲ್ಲಿ ಇರುವುದಿಲ್ಲ, ನಾನೇ ಅವುಗಳನ್ನು ನನ್ನ ತವರು ಮನೆಗೆ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ದೂರಿನಲ್ಲಿ ದಿನಾಂಕವನ್ನು ನಾನೇ ತಿದ್ದಿರುತ್ತೇನೆ.

<u>ಮರು ವಿಚಾರಣೆ ಇರುವುದಿಲ್ಲ</u>

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ನಾಗಮಂಗಲ.**